ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 31–07–2017

# ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:

ನಾಡೋಜ ಬೆಳಗಲ್ಲು ವೀರಣ್ಣ,
ಅಧ್ಯಕ್ಷರು,
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ.

ದಿನಾಂಕ: 01–08–2017 ಮಂಗಳವಾರ, ಸಮಯ: ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಎರಡನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

2. ಕಲಾವಿದ ಕಿಮ್ ಹೋ ಸುಖ್ ಇವರ
ಹೈಡಿಂಗ್ ಇನ್‌ಸೈಡ್ ದಿ ಲೈಟ್ ಚಿತ್ರಕಲಾ ಪ್ರದರ್ಶನ.

ಉದ್ಘಾಟನೆ:
ಘನತೆವೆತ್ತ ಶ್ರೀ ಲೀ ಹೈ ಕುಂಗ್,
ಪ್ರಭಾರ ರಾಯಭಾರಿಗಳು, ಕೊರಿಯ ಗಣರಾಜ್ಯ

ಮುಖ್ಯ ಅತಿಥಿಗಳು:
ಕಿಮ್ ಕುಮ್ ಪ್ಯೋಂಗ್,
ನಿರ್ದೇಶಕರು, ಕೊರಿಯ ಸಾಂಸ್ಕೃತಿಕ ಕೇಂದ್ರ ಭಾರತ

ಅದ್ವೈತ ಗಡನಾಯಕ್,
ಮಹಾ ನಿರ್ದೇಶಕರು, ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು

ದಿನಾಂಕ: 1–8–2017 ಮಂಗಳವಾರ, ಸಮಯ: ಸಂಜೆ 6–00 ಗಂಟೆಗೆ
ಸ್ಥಳ: ಮಾಣಿಕ್ಯ ವೇಲು ಮ್ಯಾನ್‌ಷನ್, ನಂ. 19, ಅರಮನೆ ರಸ್ತೆ, ಬೆಂಗಳೂರು –52

## ಪತ್ರಿಕಾ ಪ್ರಕಟಣೆ

### ಕರ್ನಾಟಕ ಭವಿಷ್ಯ ನಿಧಿಯ 2016-17 ವಾರ್ಷಿಕ ಲೆಕ್ಕ ತ:ಖ್ತೆ ವೆಬ್‌ಸೈಟ್‌ನಲ್ಲಿ ಬಿಡುಗಡೆ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರ ಅಖಿಲ ಭಾರತೀಯ ಸೇವಾನಿರತ (ಐ.ಎ.ಎಸ್.) ಅಧಿಕಾರಿಗಳ ರಾಜ್ಯ ಶ್ರೇಷ್ಠ ನ್ಯಾಯಾಲಯ ಗೌರವಾನ್ವಿತ ನ್ಯಾಯಾಧೀಶರುಗಳ ಹಾಗೂ ರಾಜ್ಯ ಸರ್ಕಾರದ ಇತರ ಇಲಾಖಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕರ್ನಾಟಕ ಭವಿಷ್ಯ ನಿಧಿಯ 2016-17 ವಾರ್ಷಿಕ ಲೆಕ್ಕ ತ:ಖ್ತೆಗಳನ್ನು http://www.agkar.cag.gov.in ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಯ ವಂತಿಗೆದಾರರು ತಮ್ಮ ಸಾಮಾನ್ಯ ಭವಿಷ್ಯ ನಿಧಿಯ 2016-17 ನೇ ಸಾಲಿನ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಎ.ಜಿ. ಕರ್ನಾಟಕ ಕಛೇರಿಯ ವೆಬ್‌ಸೈಟ್ ವಿಳಾಸದಿಂದ ಪಡೆಯಬಹುದಾಗಿದೆ ಎಂದು ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಹಕ್ಕುದಾರಿ) ಕರ್ನಾಟಕ, ಬೆಂಗಳೂರು, ಇವರು ತಿಳಿಸಿದ್ದಾರೆ.

ವಂತಿಗೆದಾರರ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಹೆಚ್.ಆರ್.ಎಂ.ಎಸ್. ವೆಬ್‌ಸೈಟ್ ವಿಳಾಸ http://www.hrms.karnataka.gov.in ದಿಂದ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳ ಮೂಲಕವೂ (HRMS>MENU>HOME> Mis Report > Download GPF Statement) ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.

ವಂತಿಗೆದಾರರ ವೆಬ್‌ಸೈಟ್‌ನಿಂದ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಪಡೆಯಲು ತೊಂದರೆ ಎದುರಾದಲ್ಲಿ ಈ ಕಚೇರಿಯ ಇ-ಮೇಲ್ ವಿಳಾಸ (agpf.kar@nic.in) ಕ್ಕೆ ಅಥವಾ ದೂರವಾಣಿ 080- 22640310 ಸಂಪರ್ಕಿಸಬಹುದಾಗಿದೆ.

# ಬಿ.ಬಿ. ಶಿವಪ್ಪ ನಿಧನಕ್ಕೆ
# ಕರ್ನಾಟಕ ವಿಧಾನ ಪರಿಷತ್ತು ಸಭಾಪತಿ ಶೋಕ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯದ ಹಿರಿಯ ನಾಯಕರು ಹಾಗೂ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದ ಬಿ.ಬಿ.ಶಿವಪ್ಪ ಅವರ ನಿಧನದ ಸುದ್ದಿ ತಿಳಿದು ತುಂಬಾ ವಿಷಾದವಾಯಿತು ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಡಿ.ಹೆಚ್. ಶಂಕರಮೂರ್ತಿ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಬಿ.ಬಿ. ಶಿವಪ್ಪನವರು ಮತ್ತು ನನ್ನ ಒಡನಾಟ 40 ವರ್ಷದಷ್ಟು ಹಳೆಯದು. ಅವರು ಸಂಘಟನಾ ಚತುರರು. ಒಬ್ಬ ಸಾಮಾನ್ಯ ಕಾರ್ಯಕರ್ತನೊಡನೆಯೂ ಆತ್ಮೀಯ ಸಂಬಂಧವನ್ನು ಇರಿಸಿಕೊಂಡಿದ್ದರು. ಶ್ರೀಯುತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಹಾಗೂ ಅವರ ಕುಟುಂಬ ವರ್ಗದವರಿಗೆ ದು:ಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಅವರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

ಜೆಡಿ:ಜಿಪಿಆರ್

# ಸೋಪ್ ಬಬಲ್ಸ್ ಕುರಿತಂತೆ ಒಂದು ದಿನದ ಕಾರ್ಯಾಗಾರ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಜವಾಹರ್‌ಲಾಲ್ ನೆಹರು ತಾರಾಲಯದ ವತಿಯಿಂದ ಆಗಸ್ಟ್ 3 ರಂದು ಬೆಳಿಗ್ಗೆ 10.30 ರಿಂದ ಸಂಜೆ 4.30 ರವರೆಗೆ "ಸೋಪ್ ಬಬಲ್ಸ್" ಕುರಿತಂತೆ ಕಾರ್ಯಗಾರವನ್ನು ನಗರದ ಹೈಗ್ರೌಂಡ್ಸ್ ಬಳಿಯ ಶ್ರೀ ಟಿ. ಚೌಡಯ್ಯ ರಸ್ತೆಯಲ್ಲಿರುವ ಜವಾಹರ್‌ಲಾಲ್ ತಾರಾಲಯದಲ್ಲಿ ವಿಜ್ಞಾನ ಮತ್ತು ಗಣಿತ ಶಿಕ್ಷಕರಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಾಗಾರದಲ್ಲಿ 40 ಶಿಕ್ಷಕರಿಗೆ ಪಾಲ್ಗೊಳ್ಳಲು ಅವಕಾಶವಿದ್ದು. ಆಸಕ್ತರು ತಮ್ಮ ಹೆಸರುಗಳನ್ನು ಆಗಸ್ಟ್ 2 ರೊಳಗಾಗಿ ನೋಂದಾಯಿಸಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ತಾರಾಲಯದ ವೆಬ್‌ಸೈಟ್ info@taralaya.org. ಅನ್ನು ವೀಕ್ಷಿಸಬಹುದಾಗಿದೆ. ದೂರವಾಣಿ ಸಂಖ್ಯೆ 2237 9725/2220 3234 ರ ಮೂಲಕ ಸಂಪರ್ಕಿಸಬಹುದಾಗಿದೆ ಎಂದು ತಾರಾಲಯದ ಅಧಿಕೃತ ಪ್ರಕಟಣೆ ತಿಳಿಸಿದೆ.

ಜಿಡಿ:ಜಿಪಿಆರ್

# ಸರ್ವ ಸದಸ್ಯರ ಸಭೆ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಬೆಂಗಳೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಹಳೆಯ ವಿದ್ಯಾರ್ಥಿನಿಯರ ಸಂಘ "ಮೈತ್ರಿ" ಯ ವತಿಯಿಂದ ಆಗಸ್ಟ್ 19 ರಂದು ಬೆಳಿಗ್ಗೆ 11.00 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ಸರ್ವ ಸದಸ್ಯರ ಸಭೆಯನ್ನು ಆಯೋಜಿಸಲಾಗಿರುತ್ತದೆ. ಎಲ್ಲಾ ಹಳೆಯ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

ಜಿಡಿ:ಜಿಪಿಆರ್

## Alumni Association "Maithri'

**Bangalore, July 31, 2017 (Karnataka Information)**

**The General body meeting of the Alumni Association "Maithri' of Maharani's Science College for Women, Bangalore is scheduled to be held on 19th August 2017 at 11 A.M. at the Conference Hall, Maharani's Science College for Women, Palace Road, Bangalore-1. All the alumni are invited to participate General Body Meeting says official press release.**